**ಪಾಠ–3** **ಜುಲೈ 11–17**

# ಯೇಸುಕ್ರಿಸ್ತನು ನೋಡಿದ ದೃಷ್ಟಿಯಿಂದ ಜನರನ್ನು ನೋಡುವುದು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಮತ್ತಾಯ 8:22–26; ಯೋಹಾನ 4:3–34; ಯೋಹಾನ 1:40,41; ಮಾರ್ಕ 12:28–34; ಲೂಕ 23:39–43; ಅ.ಕೃ 8:26–38.

**ಸ್ಮರಣವಾಕ್ಯ : "ನನ್ನ ಹಿಂದೆ ಬನ್ನಿರಿ; ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ನಿಮ್ಮನ್ನು ಮಾಡುವೆನು"** (ಮತ್ತಾಯ 4:19).

ಯೇಸುಕ್ರಿಸ್ತನು ಆತ್ಮವನ್ನು ಗೆಲ್ಲುವುದರಲ್ಲಿ ಪರಿಣತನು. ಯೇಸುಕ್ರಿಸ್ತನು ಹೇಗೆ ಜನರೊಟ್ಟಿಗೆ ಕೆಲಸ ಮಾಡಿದನೆಂಬುದನ್ನು ಗಮನಿಸಿದರೆ ಜನರನ್ನು ಯೇಸುವಿನ ಮೂಲಕ ರಕ್ಷಣೆಯ ಪರಿಜ್ಞಾನಕ್ಕೆ ಹೇಗೆ ತರಬಹುದೆಂಬುದನ್ನು ಕಲಿಯುತ್ತೇವೆ. ಯೆರೂಸಲೇಮಿನ ಜನ ನಿಬಿಡ ರಸ್ತೆಗಳಲ್ಲಿ, ಯೂದಾಯದ ಧೂಳು ತುಂಬಿದ ದಾರಿಗಳಲ್ಲಿ ಗಲಿಲಾಯದ ಬೆಟ್ಟಗುಡ್ಡಗಳ ಹುಲ್ಲು ಹಾಸುಗಳಲ್ಲಿ ಆತನೊಡನೆ ನಡೆಯುತ್ತಾ ಹೋದಂತೆ ಆತನು ಆತ್ಮಗಳನ್ನು ಗೆಲ್ಲುವುದಕ್ಕಾಗಿ ಹೇಗೆ ಪರಲೋಕದ ನಿಯಮಗಳನ್ನು ಪ್ರಕಟಿಸಿದನೆಂಬುದಾಗಿ ಕಂಡುಕೊಳ್ಳಬಹುದು.

ಎಲ್ಲಾ ಸ್ತ್ರೀಯರು ಮತ್ತು ಪುರುಷರು ತನ್ನ ರಾಜ್ಯಕ್ಕಾಗಿ ಗೆಲ್ಲತಕ್ಕವರೆಂಬುದಾಗಿ ನೋಡಿದನು. ಆತನು ಪ್ರತಿಯೊಬ್ಬರನ್ನೂ ದೈವೀಕ ಕರುಣೆಯ ಕಣ್ಣುಗಳಿಂದ

* ಈ ವಾರದ ಪಾಠವನ್ನು ಜುಲೈ 18ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

ನೋಡಿದನು. ಆತನು ಪೇತ್ರನನ್ನು ಒರಟಾದ, ದೊಡ್ಡಸ್ವರದಲ್ಲಿ ಮಾತಾಡುವ ಬೆಸ್ತನನ್ನಾಗಿ ನೋಡದೆ ಒಬ್ಬ ಬಲಾಢ್ಯನಾದ ಸುವಾರ್ತಿಕನನ್ನಾಗಿ ನೋಡಿದನು. ಆತನು ಯಾಕೋಬ ಯೋಹಾನನನ್ನು ಶಮೆದಮೆಯಿಲ್ಲದ ತೀಕ್ಷ್ಣವಾದ ತೀವ್ರಗಾಮಿಗಳಂತೆ ನೋಡದೆ ತನ್ನ ಕೃಪೆಯನ್ನು ಅತ್ಯುತ್ಸಾಹದಿಂದ ಸಾರುವವರನ್ನಾಗಿ ಕಂಡನು. ಹೃದಯದಲ್ಲಿ ನಿರ್ವಾಜ್ಯ ಪ್ರೀತಿ ಮತ್ತು ಅಂಗೀಕಾರಕ್ಕಾಗಿ ಹಂಬಲಿಸುವ ಗುಣವನ್ನು ಮಗ್ದಲದ ಮರಿಯಳಲ್ಲಿ ಸಮಾರ್ಯ ಸ್ತ್ರೀಯಲ್ಲಿ ಹಾಗೂ ರಕ್ತಕುಸುಮರೋಗದ ಹೆಂಗಸಿನಲ್ಲಿ ಕಂಡನು. ಆತನು ತೋಮನನ್ನು ಎಲ್ಲವನ್ನು ಅನುಮಾನದಿಂದ ನೋಡುವ ಗುಮಾನಿಯಂತೆ ಕಂಡುಕೊಳ್ಳದೆ ಪ್ರಾಮಾಣಿಕವಾಗಿ ಪ್ರಶ್ನೆ ಮಾಡುವವನನ್ನಾಗಿ ಕಂಡನು. ಒಬ್ಬ ಯೆಹೂದ್ಯನನ್ನಾಗಿ ಇಲ್ಲವೆ ಗ್ರೀಕನನ್ನಾಗಲೀ, ಗಂಡಾನ್ನಾಗಲೀ ಇಲ್ಲವೇ ಹೆಣ್ಣನ್ನಾಗಲೀ, ಶಿಲುಬೆಯ ಮೇಲೆ ತೂಗಾಡುತ್ತಿದ್ದ ಕಳ್ಳನನ್ನಾಗಲೀ ಶತಾಧಿಪತಿಯನ್ನಾಗಲೀ ಇಲ್ಲವೇ ದೆವ್ವಪೀಡಿತ ಹುಚ್ಚುಮನುಷ್ಯನನ್ನಾಗಲೀ ದೇವರು ಕೊಟ್ಟಿರುವ ಸಾಮರ್ಥ್ಯವನ್ನು ರಕ್ಷಣೆಯ ದೃಷ್ಟಿಯುಳ್ಳ ಕಣ್ಣುಗಳಿಂದ ನೋಡಿದನು.

**ಭಾನುವಾರ** **ಜುಲೈ 12**

## ಎರಡನೆಯ ಸ್ಪರ್ಶ

ಯೇಸುಕ್ರಿಸ್ತನು ಎರಡು ಹಂತಗಳಲ್ಲಿ ಮಾಡಿದ ಅದ್ಭುತವು ಇಡೀ ಸತ್ಯವೇದಲ್ಲಿ ಇರುವುದು ಒಂದೇ ಒಂದು. ಅದು ಬೇತ್ಸಾಯಿದ ಕೊಳದಲ್ಲಿ ಕುರುಡನೊಬ್ಬನನ್ನು ವಾಸಿಮಾಡಿದ ಅದ್ಭುತವಾಗಿದೆ. ಈ ಕಥೆಯು ಇಂದಿಗೂ ಎಂದೆಂದಿಗೂ ಅನ್ವಯವಾಗುವ ಪಾಠವನ್ನು ಕ್ರೈಸ್ತ ಸಭೆಗೆ ಒದಗಿಸಿಕೊಡುತ್ತಿದೆ. ಇದು ಪ್ರತಿಯೊಬ್ಬ ವಿಶ್ವಾಸಿಯು ಮತ್ತೊಬ್ಬನನ್ನು ಯೇಸುವಿನ ಬಳಿಗೆ ಕರೆದುಕೊಂಡು ಬರುವಂತೆ ಉಪಯೋಗಿಸುವ ದೇವರ ರಕ್ಷಣಾ ಯೋಜನೆಯನ್ನು ವಿವರಿಸುತ್ತದೆ. ವಚನವು ಹೀಗೆ ಹೇಳುತ್ತದೆ : "ಮತ್ತು ಅವರು ಬೇತ್ಸಾಯಿದ ಊರಿಗೆ ಬಂದರು ಅಲ್ಲಿ ಜನರು ಒಬ್ಬ ಕುರುಡನನ್ನು ಯೇಸುವಿನ ಬಳಿಗೆ ಕರೆದುಕೊಂಡು ಬಂದು ಇವನನ್ನು ಮುಟ್ಟಬೇಕು ಎಂದು ಬೇಡಿಕೊಂಡರು" (ಮಾರ್ಕ 8:22). ಇಲ್ಲಿ 'ಕರೆದುಕೊಂಡು ಬಂದರು' ಮತ್ತು 'ಬೇಡಿಕೊಂಡರು' ಎಂಬ ಎರಡು ಪ್ರಮುಖವಾದ ಪದಗಳಿವೆ. ಕುರುಡನು ತನ್ನಷ್ಟಕ್ಕೆ ತಾನು ಯೇಸುವಿನ ಬಳಿಗೆ

ಬರಲಿಲ್ಲ. ಆತನ ಸ್ನೇಹಿತರು ಅವನ ಅಗತ್ಯವನ್ನು ಕಂಡುಕೊಂಡು ಅವನನ್ನು ಯೇಸುವಿನ ಹತ್ತಿರಕ್ಕೆ ಕರೆದುಕೊಂಡು ಬಂದರು. ಕುರುಡನಿಗೆ ಸಾಕಷ್ಟು ನಂಬಿಕೆ ಇಲ್ಲದಿದ್ದಿರಬಹುದು ಆದರೆ ಅವರಿಗಿತ್ತು. ಯೇಸುಕ್ರಿಸ್ತನು ಈ ಮನುಷ್ಯನ ಕುರುಡುತನವನ್ನು ವಾಸಿ ಮಾಡುತ್ತಾನೆಂಬುದಾಗಿ ಅವರು ನಂಬಿದ್ದರು.

ಸುಮಾರು 25 ತರದ ಸ್ವಸ್ಥತೆಯ ಅದ್ಭುತಗಳನ್ನು ಯೇಸುಕ್ರಿಸ್ತನು ಮಾಡಿರುವುದನ್ನು ಹೊಸ ಒಡಂಬಡಿಕೆಯಲ್ಲಿ ನೋಡುತ್ತೇವೆ. ಇವುಗಳಲ್ಲಿ ಬಹುತೇಕವಾದವುಗಳು (ಅರ್ಧಕ್ಕಿಂತಲೂ ಹೆಚ್ಚು) ಅವರ ಬಂಧುಗಳು ಅಥವಾ ಸ್ನೇಹಿತರು ಯೇಸುವಿನ ಬಳಿಗೆ ಕರೆದುಕೊಂಡು ಬರುವುದನ್ನು ಕಾಣುತ್ತೇವೆ. ಅನೇಕ ಜನರು ಮತ್ತೊಬ್ಬ ವಿಶ್ವಾಸಿಯು ಕರೆತರುವ ಹೊರತು ತಾವಾಗಿಯೇ ಯೇಸುವಿನ ಬಳಿಗೆ ಬರಲಾರರು. ನಾವು ಯೇಸುಕ್ರಿಸ್ತನಿಗೆ ಇತರರನ್ನು ಪರಿಚಯಿಸುವವರ ಪಾತ್ರವನ್ನು ನಿರ್ವಹಿಸಬೇಕಾಗಿದೆ. ಮಾರ್ಕ 8:22ನೇ ವಚನದಲ್ಲಿ ಬೇಡಿಕೊಂಡರು ಎಂಬುದು ಗಮನಿಸಯೋಗ್ಯವಾದ ಎರಡನೇ ಪದವಾಗಿದೆ. ಬೇಡಿಕೊ ಎಂದರೆ ಅಂಗಲಾಚು, ಮೊರೆಯಿಡು ಅಥವಾ ಪ್ರೇರೇಪಿಸು ಎಂಬ ಅರ್ಥವನ್ನು ಕೊಡುತ್ತದೆ. ಇದು ಮೃದುವಾದ ದೀನತೆಯ ಸಾಧುತ್ವವುಳ್ಳ ಸ್ವರದಿಂದ ವಿನಂತಿಸಿಕೊಳ್ಳುವುದನ್ನು ಸೂಚಿಸುತ್ತದೆಯೆ ಹೊರತು ಗಟ್ಟಿ ಸ್ವರದಿಂದ, ಆರ್ಭಟ ಮಾಡುತ್ತಾ ಒತ್ತಾಯ ಮಾಡುವುದನ್ನು ಸೂಚಿಸುವುದಿಲ್ಲ. ಆ ಕುರುಡನನ್ನು ಯೇಸುಕ್ರಿಸ್ತನು ಗುಣಪಡಿಸುವ ಅಪೇಕ್ಷೆಯುಳ್ಳವನೂ ಸಾಮರ್ಥ್ಯವುಳ್ಳವನೂ ಆಗಿದ್ದು ಆತನಿಗೆ ಸಹಾಯ ಮಾಡುತ್ತಾನೆಂಬ ನಂಬಿಕೆಯಿಂದ ಆತನ ಸ್ನೇಹಿತರು ಅವನ ಪರವಾಗಿ ಬೇಡಿಕೊಂಡರು. ಆ ಮನುಷ್ಯನಿಗೆ ಯೇಸುವು ಗುಣಪಡಿಸಬಲ್ಲವನಾಗಿದ್ದಾನೆಂಬ ನಂಬಿಕೆ ಇಲ್ಲದಿದ್ದರೂ ಆತನ ಸ್ನೇಹಿತರಿಗೆ ಆ ನಂಬಿಕೆ ಇತ್ತು. ಕೆಲವು ಸಲ ನಾವು ನಮ್ಮ ನಂಬಿಕೆಯ ರೆಕ್ಕೆಗಳ ಮೇಲೆ ಇತರರನ್ನು ಹೊತ್ತುಕೊಂಡು ಯೇಸುವಿನ ಬಳಿಗೆ ಕರೆದು ತರುವವರಾಗಿರಬೇಕು.

ಮಾರ್ಕ 22–26 ವಚನಗಳನ್ನು ಓದಿರಿ. ಕ್ರಿಸ್ತನು ಆ ಕುರುಡನನ್ನು ಒಂದೇ ಸಲಕ್ಕೆ ಸ್ವಸ್ಥ ಮಾಡದೆ ಎರಡು ಹಂತಗಳಲ್ಲಿ ಸ್ವಸ್ಥ ಮಾಡಿದುದು ಯಾಕೆಂದು

ಆಲೋಚಿಸುವಿರಿ? ನಾವು ಯೇಸುಕ್ರಿಸ್ತನಿಗೆ ಸಾಕ್ಷಿಗಳಾಗಿರಬೇಕೆಂಬುದಕ್ಕೆ ಈ ಕಥೆಯು ಯಾವ ಪಾಠವನ್ನು ಕೊಡುತ್ತದೆ?

________________________________________

________________________________________

ನಮಗೂ ಕೂಡ ಜನರನ್ನು ಸರಿಯಾಗಿ (ಸ್ಪಷ್ಟವಾಗಿ) ನೋಡುವುದಕ್ಕಾಗುತ್ತಿಲ್ಲವೇ? ಕೆಲವು ಸಲ ನಮಗೂ ಸಹ ಜನರು ಪರಲೋಕಕ್ಕೆ ಸೇರಬೇಕಾದ ಅಭ್ಯರ್ಥಿಗಳಂತೆ ಕಾಣದೆ ಅಸ್ಪಷ್ಟವಾಗಿ ಮರಗಳಂತೆ ಗೋಚರವಾಗುತ್ತಿದ್ದಾರೆಯೇ? ಜನರನ್ನು ಸರಿಯಾಗಿ ನೋಡುವಂತೆ ನಮ್ಮನ್ನು ನಡೆಸುವುದು ಯಾವುದೆಂದು ನೀವು ಭಾವಿಸುತ್ತೀರಿ?

ದೇವರು ನಮ್ಮನ್ನು ಇತರರನ್ನು ತಲುಪುವುದಕ್ಕಾಗಿ ಉಪಯೋಗಿಸುತ್ತಾನೆಂಬುದರ ಜೊತೆಗೆ ಸುಲಭವಾಗಿ ಅರ್ಥವಾಗುವ ಮತ್ತ್ಯಾವ ಪಾಠವನ್ನು ಈ ಕಥೆಯಿಂದ ನಾವು ಕಲಿತುಕೊಳ್ಳಬಹುದಾಗಿದೆ? ಸ್ವಸ್ಥ ಮಾಡುವ ಸೇವೆಯು ವೈದ್ಯಕೀಯ ಮತ್ತು ಆಧ್ಯಾತ್ಮಿಕ ಅಂಶಗಳನ್ನು ಹೇಗೆ ಒಳಗೊಂಡಿದೆ ಎಂಬುದರ ಬಗ್ಗೆ ಈ ಕಥೆಯು ನಮಗೆ ಏನನ್ನು ಬೋಧಿಸುತ್ತದೆ?

**ಸೋಮವಾರ** **ಜುಲೈ 13**

## ಅಂಗೀಕರಣೆಯಲ್ಲಿ ಒಂದು ಪಾಠ (ಬೋಧನೆ)

ಪ್ರತಿಯೊಬ್ಬ ವ್ಯಕ್ತಿಯನ್ನು ಪರಲೋಕದ ಕಣ್ಣುಗಳಿಂದ ಹೇಗೆ ಹೊಸ ದೃಷ್ಟಿಯಿಂದ ನೋಡಬೇಕೆಂಬುದಕ್ಕೆ ಯೇಸುವು ತನ್ನ ಶಿಷ್ಯರಿಗೆ ಮಾದರಿಯಾಗಿ ಬೋಧಿಸುತ್ತಿದ್ದನು. ಆತನು ಜನರನ್ನು ತೀವ್ರ ಸುಧಾರಣೆಯ ದೃಷ್ಟಿಯಿಂದ ನೋಡುತ್ತಿದ್ದನು. ಆತನು ಜನರನ್ನು ಅವರು ಏನಾಗಿದ್ದಾರೆಂದು ದೃಷ್ಟಿಸಿದೆ, ಮುಂದೆ ಏನಾಗುತ್ತಾರೆಂದು ಅರಿತವನಾಗಿ ದೃಷ್ಟಿಸುತ್ತಿದ್ದನು. ಆತನು ಜನರಿಗೆ ತಕ್ಕ ಸ್ಥಾನಮಾನವನ್ನು ಕೊಟ್ಟು ಅವರೊಂದಿಗೆ ಸಂವಾದ ಮಾಡುತ್ತಿದ್ದನು. ಜನರನ್ನು ಆದರಿಸುವ ರೀತಿಯಿಂದ ತನ್ನ ಶಿಷ್ಯರಿಗೆ ಆಗಾಗ್ಗೆ ಅಚ್ಚರಿ ಮೂಡಿಸುತ್ತಿದ್ದನು. ಸಮಾರ್ಯದ ಸ್ತ್ರೀಯ ಜೊತೆ ನಡೆಸಿದ ಆತನ ಸಂವಾದವು ವಿಶೇಷವಾಗಿ ಇದನ್ನು ನಿಜವೆಂದು ತೋರಿಸಿಕೊಡುತ್ತದೆ.

ಸತ್ಯವೇದದ ಪುರಾತತ್ವದ ಅಧ್ಯಯನವು (Archaeological Study) ಯೆಹೂದ್ಯರ ಮತ್ತು ಸಮಾರ್ಯರ ನಡುವೆ ಇದ್ದ ಸಂಬಂಧದ ಬಗ್ಗೆ ಆಸಕ್ತಿಕರವಾದ ಸಂಗತಿಯನ್ನು ಹೊರಗೆಡುಹಿದೆ. "ಸಮಾರ್ಯರ ಮತ್ತು ಯೆಹೂದ್ಯರ ನಡುವೆಯಿದ್ದ ಸಾಮಾಜಿಕ ಅಂತರ (ಕಂದಕ) ಬಹಳ ಹಿಂದಿನ ಕಾಲದಿಂದಲೂ ಚಾಲ್ತಿಯಲ್ಲಿತ್ತು. 2 ಅರಸುಗಳು 17ನೇ ಅಧ್ಯಾಯದ ಪ್ರಕಾರ ಸಮಾರ್ಯದವರು ಮೆಸಪೊಟೇಮಿಯ ಮೂಲದವರಾಗಿದ್ದು ಅಶ್ಶೂರದ ಅರಸನಿಂದ ಕ್ರಿಸ್ತಪೂರ್ವ 722ನೇ ವರ್ಷದಲ್ಲಿ ಗಡಿಪಾರುಗೊಂಡು ಒತ್ತಾಯಪೂರ್ವಕವಾಗಿ ಉತ್ತರ ಇಸ್ರಾಯೇಲಿನಲ್ಲಿ ವಾಸಿಸುತ್ತಿದ್ದರು.

"ಅವರು ಯೆಹೋವನ ಆರಾಧನೆಯನ್ನು ವಿಗ್ರಹಗಳ ಪೂಜಾ ಪದ್ಧತಿಯನ್ನು ಜೊತೆ ಜೊತೆಯಾಗಿ ನಡೆಸಿಕೊಂಡು ಬರುತ್ತಿದ್ದರು" The Archaeological Study Bible (Zonderran Publishing, 2005), ಪುಟ 1727. ಈ ವಿಗ್ರಹಾರಾಧನೆಯ ಪದ್ಧತಿಗಳೊಂದಿಗೆ ಅವರು ಯೆರೂಸಲೇಮಿಗೆ ವಿರೋಧವಾಗಿ ಗೆರಿಜ್ಜೀಮ್ ಬೆಟ್ಟದಲ್ಲಿ ದೇವಾಲಯವನ್ನೂ ಯಾಜಕರನ್ನೂ ಸ್ಥಾಪಿಸಿಕೊಂಡಿದ್ದರು. ಸಮಾರ್ಯರೊಂದಿಗಿದ್ದ ಈ ಎಲ್ಲಾ ತಾತ್ವಿಕ ವ್ಯತ್ಯಾಸಗಳನ್ನು ಪರಿಗಣಿಸಿ ಶಿಷ್ಯರು ಸಮಾರ್ಯ ಸೀಮೆಯನ್ನು ಹಾದು ಹೋಗುವಾಗ ಯೇಸುವು ಆ ಮಾರ್ಗವನ್ನು ಹಿಡಿದು ಗಲಿಲಾಯಕ್ಕೆ ತಲುಪಲು ಆಯ್ಕೆ ಮಾಡಿಕೊಂಡದ್ದಕ್ಕೆ ಅವರು ಗೊಂದಲಕ್ಕೀಡಾಗಿರುತ್ತಾರೆ. ಯೇಸುವು ಧಾರ್ಮಿಕ ಭಿನ್ನಾಭಿಪ್ರಾಯಗಳಲ್ಲಿ ಯಾವುದೇ ಚರ್ಚೆಯನ್ನು ಮಾಡದೆ ಆ ವಿಷಯದಲ್ಲಿ ಆತನು ಸುಮ್ಮನಿದ್ದುದಕ್ಕೆ ಶಿಷ್ಯರು ಆಶ್ಚರ್ಯಪಡುತ್ತಾರೆ. ಸಮಾರ್ಯದ ಸ್ತ್ರೀಯು ಆತನ ಅಂಗೀಕಾರಕ್ಕೂ, ಪ್ರೀತಿಗೂ ಕ್ಷಮಾಪಣೆಗೂ ಹಂಬಲಿಸಿದಾಗ ಆತನು ಧಾರ್ಮಿಕ ವ್ಯತ್ಯಾಸಗಳನ್ನು ಪರಿಗಣಿಸದೆ ನೇರವಾಗಿ ಸ್ಪಂದಿಸುತ್ತಾನೆ.

ಯೋಹಾನ 4:3–34 ವಚನಗಳನ್ನು ಓದಿರಿ. ಯೇಸುವು ಸಮಾರ್ಯದ ಹೆಂಗಸನ್ನು ಹೇಗೆ ವಿಶ್ವಾಸಕ್ಕೆ ತೆಗೆದುಕೊಂಡನು? ಯೇಸುವು ನಡೆಸಿದ ಸಂಭಾಷಣೆಗೆ ಆ ಸ್ತ್ರೀಯು ಹೇಗೆ ಸ್ಪಂದಿಸಿದಳು? ಈ ಘಟನೆಯಿಂದ ಶಿಷ್ಯರು ತಮ್ಮ ದೃಷ್ಟಿಯನ್ನು ಹೇಗೆ ವಿಶಾಲಪಡಿಸಿಕೊಂಡರು ಮತ್ತು ಅವರಿಗುಂಟಾದ ಅನುಭವಕ್ಕೆ ಹೇಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದರು?

ಯೇಸುವು ನಮಗೂ ತನ್ನ ಶಿಷ್ಯರಿಗೂ ಕಲಿಸಬಯಸಿದ ನಿತ್ಯವಾದ ಪಾಠವು ಸರಳವಾಗಿ ಹೀಗಿದೆ: "ಯಾರ್‍ಯಾರು ಯೇಸುಕ್ರಿಸ್ತನ ಆತ್ಮವನ್ನು ಹೊಂದಿರುತ್ತಾರೋ ಅವರು ಮನುಷ್ಯರೆಲ್ಲರನ್ನೂ ದೈವೀಕವಾದ ಅನುಕಂಪದ ಕಣ್ಣುಗಳಿಂದ ನೋಡುವವರಾಗಿರುತ್ತಾರೆ"– ಎಲೆನ್ ಜಿ ವೈಟಮ್ಮನವರ ಜೂನ್ 20, 1982ರ ದಿ ಸೈನ್ಸ್ ಆಫ್ ಟೈಮ್ಸ್ ನಿಮ್ಮ ಸ್ವಂತ ಸಮುದಾಯದ ಮತ್ತು ಸಂಸ್ಕೃತಿಯಿಂದ ಪ್ರಭಾವಕ್ಕೊಳಗಾಗಿ ನೀವು ಯಾವ ಜನರನ್ನು ತಿರಸ್ಕೃತಭಾವದಿಂದ ಕಾಣುತ್ತಿರುವಿರಿ? ನೀವು ಯಾಕೆ ಈ ಮನೋಭಾವವನ್ನು ಬದಲಾಯಿಸಿಕೊಳ್ಳಬೇಕು ಮತ್ತು ಆ ಬದಲಾವಣೆಯು ಹೇಗೆ ಬರುತ್ತದೆ?

**ಮಂಗಳವಾರ** **ಜುಲೈ 14**

## ನೀವು ಎಲ್ಲಿರುವಿರೋ ಅಲ್ಲಿಂದಲೇ ಆರಂಭಿಸಿ

"ನಾವು ಜೀವನದಲ್ಲಿ ಎಲ್ಲಿದ್ದೇವೆಯೋ ಅಲ್ಲಿಂದಲೇ ಆರಂಭಿಸಬೇಕು ನಾವಿರುವ ಜಾಗದಿಂದಲ್ಲದೆ ಮತ್ತೊಂದು ಜಾಗದಿಂದ ಆರಂಭಿಸಲು ಸಾಧ್ಯವಿಲ್ಲವೆಂಬುದಾಗ ಅರಿತವರು ಹೇಳುತ್ತಾರೆ". ಅ.ಕೃ. 1:8ನೇ ವಚನದಲ್ಲಿ ಈ ನಿಯಮಕ್ಕೆ ಒತ್ತುಕೊಟ್ಟು ಹೀಗೆ ಹೇಳುತ್ತಾನೆ: "ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟ ಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು".

ಯೇಸುವಿನ ಸಂದೇಶವು ಶಿಷ್ಯರು ಅಪಾರ್ಥ ಮಾಡಿಕೊಳ್ಳದಷ್ಟು ಸರಳವಾಗಿರುತ್ತದೆ. ನೀನಿರುವಲ್ಲಿಂದಲೇ ಪ್ರಾರಂಭಿಸು, ದೇವರು ನಿನ್ನನ್ನು ಎಲ್ಲ ನೆಲೆಗೊಳಿಸಿದ್ದಾನೋ ಅಲ್ಲಿಯೇ ಸಾಕ್ಷಿಯಾಗಿರು. ಹೆಚ್ಚಿನ ಮಟ್ಟದ ಅವಕಾಶಗಳಿಗಾಗಿ ಕನಸು ಕಾಣುತ್ತಾ ಕಾಲವನ್ನು ಕಳೆಯುವುದಕ್ಕಿಂತಲೂ ನಿನ್ನ ಸುತ್ತಲೂ ಇರುವ ಅವಕಾಶಗಳೊಂದಿಗೆ ಆರಂಭಿಸು. ನಿನ್ನ ಸಮೀಪದಲ್ಲಿರುವ ಸಾಧ್ಯತೆಗಳನ್ನು ದೈವೀಕ ಕಣ್ಣುಗಳಿಂದ ನೋಡು ಎಂಬುದಾಗಿ ಉಪದೇಶಿಸುತ್ತಾನೆ.

ನೀನು ಈ ಲೋಕದ ಅತ್ಯಂತ ದೊಡ್ಡಮಟ್ಟದ ಶಿಕ್ಷಣ ಪಡೆದವನಾಗಿರಬೇಕಾಗಿಲ್ಲ ವಾಗ್ಮಿಯಾಗಿರಬೇಕಾಗಿಲ್ಲ, ಪ್ರತಿಭಾಶಾಲಿಯಾಗಿರಬೇಕಾಗಿಲ್ಲ; ಸಮರ್ಪಕವಾಗಿ ಉಪಯೋಗಿಸಿಕೊಂಡಾಗ ಇವುಗಳು ನಿನಗೆ ಎಷ್ಟೇ ಉಪಯುಕ್ತವೆನಿಸಿದರೂ ಕಟ್ಟಕಡೆಯಲ್ಲಿ ನಿನಗೆ ಬೇಕಾಗಿರುವುದು ದೇವರ ಮೇಲೆ ಮತ್ತು ಆತ್ಮಗಳ ಮೇಲೆ ಇಡುವ ನಿನ್ನ ಪ್ರೀತಿ. ನೀನು ಸಾಕ್ಷಿಕೊಡುವುದಕ್ಕೆ ಬಯಸುವವುದಾದರೆ ದೇವರು ನೀನು ಹಾಗೆ ಮಾಡುವಂತೆ ದಾರಿ ತೆರೆಯುತ್ತಾನೆ.

ಯೋಹಾನ 1:40,41 ಮತ್ತು ಯೋಹಾನ 6:5–11 ಮತ್ತು 12:20–26 ವಚನಗಳನ್ನು ಓದಿರಿ. ಈ ವಚನವೃಂದಗಳು ಅಂದ್ರೇಯನ ಆಧ್ಯಾತ್ಮಿಕ ದೃಷ್ಟಿಯ ಬಗ್ಗೆ ಮತ್ತು ಆತನು ಸಾಕ್ಷಿ ಕೊಡುವುದಕ್ಕೆ ಅನುಸರಿಸುವ ವಿಧಾನದ ಬಗ್ಗೆ ಏನನ್ನು ಹೇಳುತ್ತವೆ?

---

---

ಆಂದ್ರೇಯನ ಅನುಭವವು ನಮಗೆ ಬಹಳಷ್ಟನ್ನು ಹೇಳುತ್ತದೆ. ಆತನು ತನ್ನ ಕುಟುಂಬದಲ್ಲಿಯೇ ಆರಂಭಿಸಿದನು. ಆತನು ಮೊಟ್ಟಮೊದಲಾಗಿ ಕ್ರಿಸ್ತನನ್ನು ತನ್ನ ಅಣ್ಣನಾದ ಪೇತ್ರನೊಂದಿಗೆ ಹಂಚಿಕೊಂಡನು. ಆತನು ಚಿಕ್ಕಹುಡುಗನ ಜೊತೆ ಸೌಹಾರ್ದಯುತವಾದ ಸಂಬಂಧವನ್ನು ಬೆಳೆಸಿಕೊಂಡನು. ಯೇಸುವು ಒಂದು ದೊಡ್ಡ ಅದ್ಭುತವನ್ನು ಜರುಗಿಸಲು ಅಗತ್ಯವಾದ ಐದುರೊಟ್ಟಿ ಎರಡು ಮೀನನ್ನು ಆ ಹುಡುಗನಿಂದ ಪಡೆದುಕೊಂಡನು. ಅಂದ್ರೇಯನು ಗ್ರೀಕರ ಜೊತೆ ಚೆನ್ನಾಗಿ ವರ್ತಿಸಿಕೊಳ್ಳುವುದನ್ನು ಕಲಿತಿದ್ದನು, ತಾತ್ವಿಕ ವಿಷಯಗಳಲ್ಲಿ ವಾಗ್ವಾದ ಮಾಡುವುದಕ್ಕಿಂತ ಅವರ ಅಗತ್ಯಗಳನ್ನು ಕಂಡುಕೊಂಡು ಅವರನ್ನು ಯೇಸುವಿಗೆ ಪರಿಚಯ ಪಡಿಸುತ್ತಿದ್ದನು. ಪರಿಣಾಮಾತ್ಮಕವಾಗಿ ಆತ್ಮಗಳನ್ನು ಗೆಲ್ಲುವುದು ಸಕಾರಾತ್ಮಕವಾದ ಕಾಳಜಿಯುಕ್ತವಾದ ಸಂಬಂಧಗಳನ್ನು ಕಟ್ಟುವಂತಹ ಕಲೆಯಾಗಿದೆ. ನಿಮಗೆ ಬಹಳ ಹತ್ತಿರವಾಗಿದ್ದು ಯೇಸುವನ್ನು ಇನ್ನೂ ಅರಿಯದಿರುವವರ ಬಗ್ಗೆ ಆಲೋಚಿಸಿರಿ. ನಿಮ್ಮ ಜೀವನವನ್ನು ನೋಡಿ ಅವರು ನಿಮ್ಮಲ್ಲಿ ಕಾಳಜಿಯುಳ್ಳ ಕನಿಕರಪಡುವ ವ್ಯಕ್ತಿಯನ್ನು ಕಂಡುಕೊಂಡಿದ್ದಾರೆಯೆ?

ನಿಮ್ಮಲ್ಲಿ ತಾವು ಹಂಬಲಿಸುವ ಸಮಾಧಾನ ಮತ್ತು ಉದ್ದೇಶವನ್ನು ಕಂಡುಕೊಳ್ಳುವರೇ? ನಿಮ್ಮ ಜೀವನವು ಸುವಾರ್ತೆಯನ್ನು ಬಿಂಬಿಸುವ ಜಾಹಿರಾತಾಗಿದೆಯೆ? ನಾವು ಯೇಸುವನ್ನು ಹಂಚಿಕೊಳ್ಳುವಾಗ ದೇವರಿಗೆ ಸ್ನೇಹಿತರನ್ನು ಮಾಡಿಕೊಡುವವರಾಗಿದ್ದೇವೆ. ಅವರು ಕ್ರೈಸ್ತ ಸ್ನೇಹಿತರಾಗುತ್ತಾರೆ ನಂತರ ನಾವು ಅವರಿಗೆ ಸತ್ಯವೇದದಲ್ಲಿರುವ ದೇವರ ಅಂತಿಮಕಾಲದ ಸಂದೇಶಗಳನ್ನು ಅವರೊಂದಿಗೆ ಹಂಚಿಕೊಂಡಾಗ ಅಂತೇಯವಾಗಿ ಸೆವೆಂತ್ ಡೇ ಅಡ್ವೆಂಟಿಸ್ಟರಾಗಿಯೂ ಸಹ ರೂಪುಗೊಳ್ಳುತ್ತಾರೆ.

ಅನೇಕ ಸಂದರ್ಭಗಳಲ್ಲಿ ನಮ್ಮ ಕುಟುಂಬದ ಸದಸ್ಯರನ್ನು ಮತ್ತು ಸಂಬಂಧಿಕರನ್ನು ಯೇಸುವಿನ ಹತ್ತಿರಕ್ಕೆ ನಡೆಸುವುದು ಬಹಳ ಕಷ್ಟವಾಗುತ್ತದೆ ಎಕೆ? ನಿಮ್ಮ ಕುಟುಂಬದವರೊಟ್ಟಿಗೆ ಅಥವಾ ಆಪ್ತಸ್ನೇಹಿತನಿಗೆ ಯೇಸುವನ್ನು ಹಂಚಿಕೊಳ್ಳುವುದರಲ್ಲಿ ಯಶಸ್ಸು ಪಡೆದಿರುವಿರಾ? ತರಗತಿಗೆ ಉಪಯುಕ್ತವೆನಿಸುವ ಯಾವುದಾದರೂ (ಸುವಾರ್ತೆ ಸಾರುವ ಮತ್ತು ಸಾಕ್ಷಿಕೊಡುವ) ವಿಧಾನವನ್ನು ಹಂಚಿಕೊಳ್ಳಿರಿ.

**ಬುಧವಾರ** **ಜುಲೈ 15**

## ಕಠಿಣ ಜನರೊಂದಿಗೆ ವ್ಯವಹರಿಸುವುದು

ಯೇಸುವು ಕಠಿಣ ಜನರೊಂದಿಗೆ ವ್ಯವಹರಿಸುವುದರಲ್ಲಿ ಪರಿಣತನಾಗಿದ್ದನು. ಆತನು ತನ್ನ ನಡೆಯಿಂದಲೂ ನುಡಿಯಿಂದಲೂ ಜನರನ್ನು ಅಂಗೀಕಾರ ಮಾಡಿಕೊಳ್ಳುವವನೆಂದು ತೋರಿಸಿಕೊಟ್ಟಿದ್ದನು. ಆತನು ಅವರ ಚಿಂತೆಗಳನ್ನು (ಕಾಳಜಿಯನ್ನು) ಸೂಕ್ಷ್ಮವಾಗಿ ಆಲಿಸುತ್ತಿದ್ದನು, ಪ್ರಶ್ನೆಗಳನ್ನು ಹಾಕುತ್ತಿದ್ದನು, ಕ್ರಮೇಣವಾಗಿ ದೈವೀಕ ಸತ್ಯಗಳನ್ನು ಹೊರಪಡಿಸುತ್ತಿದ್ದನು. ಆತನು ಕಠಿಣ ಹೃದಯಗಳ ಒಳಗಿನ ತುಡಿತವನ್ನು ಗುರುತಿಸುವನಾಗಿದ್ದನು ಮತ್ತು ಕಡುಪಾಪಿಗಳಲ್ಲಿರುವ ಅಂತಃಸತ್ವವನ್ನು ನೋಡುವವನಾಗಿದ್ದನು. ಸುವಾರ್ತೆಗೆ ನಿಲುಕಲಾರದವನೊಬ್ಬನೂ ಇರುವುದಿಲ್ಲವೆಂದು ಯೇಸುಕ್ರಿಸ್ತನು ಅರಿತಿದ್ದನು (ಅಂದರೆ ಎಂಥಾ ಪಾಪಿಯೂ ಸುವಾರ್ತೆಯು ಸಾರಲ್ಪಡುವುದಕ್ಕೆ ಯೋಗ್ಯನಾಗಿದ್ದಾನೆ). "ಯಾರೂ ಮೇಲೆ ಬರಲಾರದಷ್ಟು ತಳಕ್ಕೆ ಬಿದ್ದಿಲ್ಲ, ಯಾರೂ

ಅತಿದುಷ್ಟರೂ ಅಲ್ಲ, ಆದರೆ ಅವರೆಲ್ಲ ತನ್ನಲ್ಲಿ ಬಿಡುಗಡೆ ಹೊಂದುತ್ತಾರೆಂದು ಯೇಸುಕ್ರಿಸ್ತನು ಖಂಡಿತವಾಗಿ ನಂಬಿದ್ದನು". ಎಲೆನ್ ಜಿ ವೈಟಮ್ಮನವರ ಡಿಸೈರ್ ಆಫ್ ಏಜಸ್ ಪುಸ್ತಕದಲ್ಲಿ 258ನೇ ಪುಟ. ಯೇಸುಕ್ರಿಸ್ತನು ಜನರನ್ನು ನಮ್ಮಂತೆ ಒಂದೇ ದೃಷ್ಟಿಯಲ್ಲಿ ನೋಡುವವನಾಗಿರದೆ ಬೇರೆ ಬೇರೆ ಮಸ್ಸೂರಗಳ ಮೂಲಕ ನೋಡುತ್ತಿದ್ದನು. ಆತನು ಪ್ರತಿಯೊಬ್ಬರಲ್ಲಿಯೂ ಸೃಷ್ಟಿಯ ಮೂಲದಲ್ಲಿದ್ದ ಮಹಿಮೆಯ ಪ್ರತಿಬಿಂಬವನ್ನು ನೋಡುತ್ತಿದ್ದನು. ಜನರು ತಾವೇನಾಗಬೇಕೆಂಬುದರ ಸಾಧ್ಯತೆಯನ್ನು ಗ್ರಹಿಸಿಕೊಳ್ಳುವಂತೆ ಅವರ ಆಲೋಚನೆಗಳನ್ನು ಮೇಲಕ್ಕೆ ಎತ್ತುತ್ತಿದ್ದನು. ಅನೇಕರು ತಮ್ಮ ಜೀವಿತಗಳಲ್ಲಿ ಕ್ರಿಸ್ತನು ನಿರೀಕ್ಷಿಸುವಷ್ಟು ಮಟ್ಟಕ್ಕೆ ಏರಿದ್ದರು.

ಮತ್ತಾಯ 4:18,19 ಮತ್ತು ಮಾರ್ಕ 12:28–34 ಮತ್ತು ಲೂಕ 23:39–43 ವಚನಗಳನ್ನು ಓದಿರಿ. ಯೇಸುಕ್ರಿಸ್ತನು ಪೇತ್ರ ಮತ್ತು ಯೋಹಾನರಿಗೆ, ಪ್ರಶ್ನೆ ಮಾಡಿದ ಶಾಸ್ತ್ರಿಗೆ ಮತ್ತು ಶಿಲುಬೆ ಏರಿಸಲ್ಪಟ್ಟಿದ್ದಕಳ್ಳನಿಗೆ ಮಾಡಿದ ಮನವಿಗಳ ಏನು ಸಾಮ್ಯತೆ ಇದೆ? ಯೇಸುಕ್ರಿಸ್ತನು ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಈ ಸಂದರ್ಭಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿರಿ. ಇಲ್ಲಿ ಯಾವುದು ನಿಮಗೆ ಎದ್ದು ಕಾಣುತ್ತದೆ?

ಯೇಸುವು ತಾನು ಹೋದ ಕಡೆಯಲ್ಲೆಲ್ಲಾ ಆಧ್ಯಾತ್ಮಿಕ ಸಾಧ್ಯತೆಗಳನ್ನು ನೋಡುತ್ತಾನೆ. ಅಸಾಧ್ಯವೆನಿಸುವ ಸನ್ನಿವೇಶಗಳಲ್ಲಿಯೂ ಯೇಸುವು ದೇವರ ರಾಜ್ಯಕ್ಕೆ ಅಂತಃಸತ್ವವುಳ್ಳ ಅಭ್ಯರ್ಥಿಗಳನ್ನು ಕಾಣುತ್ತಿದ್ದನು. ನಾವು ಈ ಸಾಮರ್ಥ್ಯವನ್ನು ಸಭಾವೃದ್ಧಿನೇತ್ರಗಳು (ಸಭೆಯ ಬೆಳವಣಿಗೆಯ ಕಣ್ಣುಗಳು) ಎಂದು ಕರೆಯಬಹುದು ಸಭೆಯ ಬೆಳವಣಿಗೆಯನ್ನು ಅಪೇಕ್ಷಿಸುವ ಕಣ್ಣುಗಳು ಎಂದರೆ ಯೇಸುವು ಜನರನ್ನು ನೋಡಿದ ದೃಷ್ಟಿಯಿಂದಲೇ ನಾವೂ ಸಹಾ ಸಂಸ್ಕೃತಗೊಂಡ ಸೂಕ್ಷ್ಮತೆಯಿಂದ ದೇವರ ರಾಜ್ಯಕ್ಕೆ ಗೆಲ್ಲಬಹುದಾದವರನ್ನು ಕಾಣುವುದೇ ಆಗಿದೆ. ಹಾಗೆಯೇ ಸಭಾವೃದ್ಧಿ ಕಿವಿಗಳು ಎಂದರೆ ನಮ್ಮ ಸುತ್ತಯಿರುವವರು ಹೇಳಿಕೊಳ್ಳಲಾಗದ ಅಗತ್ಯತೆಗಳನ್ನು ಕೇಳಿಸಿಕೊಳ್ಳುವುದಕ್ಕೆ ಸಂಬಂಧಪಟ್ಟದ್ದಾಗಿದೆ. ತಮಗೆ ಇಲ್ಲದಿರುವಂಥದ್ದನ್ನು ಇಲ್ಲವೆಂದು ಮುಕ್ತವಾಗಿ

ಹೇಳಿಕೊಳ್ಳದಿದ್ದರೂ ಅವರ ಹೃದಯದ ತವಕವನ್ನು ಆಲಿಸುವುದಕ್ಕೆ ಸಂಬಂಧಪಟ್ಟದ್ದಾಗಿದೆ.

ಇತರರ ಜೀವಿತದಲ್ಲಿ ಪರಿಶುದ್ಧಾತ್ಮನು ಮಾಡುವ ಸೇವೆಗೆ ನಮ್ಮನ್ನೂ ಸಹಾ ಸಂವೇದನೆಯುಳ್ಳವರನ್ನಾಗಿ ಮಾಡಬೇಕೆಂದು ದೇವರನ್ನು ಕೇಳಿಕೊಳ್ಳಿರಿ. ಪ್ರತಿದಿನವೂ ನಮ್ಮ ನಂಬಿಕೆಯನ್ನು ಇತರರೊಂದಿಗೆ ಹಂಚಿಕೊಳ್ಳಲು ಆತನು ಒದಗಿಸುವ ಆತ್ಮೀಕ ಅವಕಾಶಗಳನ್ನು ನಮ್ಮ ಕಣ್ಣುಗಳು ಕಾಣುವಂತೆ ಅವುಗಳನ್ನು ಎರಡನೆಯ ಸಲ ಮುಟ್ಟಬೇಕೆಂದು ದೇವರನ್ನು ಪ್ರಾರ್ಥಿಸಿರಿ. ಕಾಣಿಸುವ ಕಣ್ಣುಗಳಿಗಾಗಿ, ಆಲಿಸುವ ಕಿವಿಗಳಿಗಾಗಿ ಮತ್ತು ಸಂವೇದನೆಯುಳ್ಳ ಹೃದಯಕ್ಕಾಗಿ ನೀವು ದೇವರನ್ನು ಬೇಡಿಕೊಳ್ಳಿರಿ. ಮತ್ತು ನಿಮಗೆ ಗೊತ್ತಿರುವ ಕ್ರಿಸ್ತನನ್ನೂ ಅವನ ಪ್ರೀತಿಯನ್ನೂ ಇತರರೊಂದಿಗೆ ಹಂಚಿಕೊಳ್ಳುವಂತಹ ಸಿದ್ಧ ಮನಸ್ಸಿಗಾಗಿ ಬೇಡಿಕೊಳ್ಳಿರಿ. ಆವಾಗ ನೀವು ನಿಮ್ಮ ಜೀವಿತದ ಪ್ರಯಾಣದಲ್ಲಿ ಸಂಭ್ರಮ ಪಡುವಿರಿ. ಜೀವಿತವು ಪೂರ್ಣವಾಗಿ ಹೊಸ ಅರ್ಥವನ್ನು ಪಡೆದುಕೊಳ್ಳುತ್ತದೆ. ನೀವು ಮುಂಚೆ ಎಂದೆಂದಿಗೂ ಅನುಭವಿಸಿದ ಸಂತೋಷ ಮತ್ತು ಸಂತೃಪ್ತಿಯ ಅರಿವನ್ನು ಹೊಂದುವಿರಿ. ಯಾರು ಆತ್ಮಗಳಿಗಾಗಿ ದುಡಿಯುವರೋ ಅವರು ಮಾತ್ರ ಅದರಿಂದ ಸಿಗುವ ಸಂತೃಪ್ತಿಯನ್ನು ಬಲ್ಲವರಾಗಿರುತ್ತಾರೆ.

**ಗುರುವಾರ** **ಜುಲೈ 16**

## ದೈವೀಕ ಅವಕಾಶಗಳನ್ನು ಅರಿಯುವುದು

ದೇವರ ರಾಜ್ಯದ ಏಳಿಗೆಗಾಗಿ ಶಿಷ್ಯರು ದೈವೀಕ ಅವಕಾಶಗಳ ಅನುಕೂಲಗಳನ್ನು ಹೇಗೆ ತೆಗೆದುಕೊಂಡರೆಂಬ ಕಥೆಗಳಿಂದ ಅಪೋಸ್ತಲರ ಕೃತ್ಯಗಳ ಪುಸ್ತಕ ತುಂಬಿಕೊಂಡಿದೆ. ಪುಸ್ತಕದ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೆ ಆದಿಸಭೆಯು ಒಳಗಿನ ಮತ್ತು ಹೊರಗಿನ ಸವಾಲುಗಳನ್ನು ಎದುರಿಸಿಕೊಂಡು ಹೇಗೆ ಬೆಳೆಯಿತು ಎಂಬ ಸ್ವಾರಸ್ಯಕರವಾದ ಕಥೆಗಳನ್ನು ಓದುತ್ತೇವೆ.

2 ಕೊರಿಂಥ 2:12,13ನೇ ವಚನಗಳು ಇಲ್ಲಿ ಪೌಲನು ತ್ರೋವದಲ್ಲಿ ತನಗಾದ ಅನುಭವವನ್ನು ಕುರಿತು ಹೇಳುತ್ತಾನೆ. "ಕ್ರಿಸ್ತನ ಸುವಾರ್ತೆಯನ್ನು ಸಾರುವುದಕ್ಕಾಗಿ ತಾನು ತ್ರೋವಕ್ಕೆ ಬರಲು ಕರ್ತನ ಕೃಪೆಯಿಂದ ನನಗೆ ಒಳ್ಳೇ ಸಂದರ್ಭ

ಉಂಟಾಯಿತು. ಆದರೂ ನನ್ನ ಸಹೋದರನಾದ ತೀತನು ನಿನಗೆ ಸಿಕ್ಕಲಿಲ್ಲವಾದ ಕಾರಣ ನನ್ನ ಆತ್ಮಕ್ಕೆ ಉಪಶಮನವಿಲ್ಲದೆ ಅಲ್ಲಿದ್ದರಿಂದ ಕಳುಹಿಸಿಕೊಂಡವನಾಗಿ ಹೊರಟು ಮೆಕೆದೋನ್ಯಕ್ಕೆ ಬಂದೆನು". ಪೌಲನು ಯೂರೋಪ್ ಖಂಡದಲ್ಲಿ ಸುವಾರ್ತೆಯನ್ನು ಸಾರುವಂತೆ ದೇವರು ಅದ್ಭುತವಾಗಿ ಬಾಗಿಲು ತೆರೆದನು. ಇಂದು ತೆರೆದ ಬಾಗಿಲು ನಾಳೆ ಮುಚ್ಚಿಕೊಳ್ಳಬಹುದು ಎಂಬುದು ಆತನಿಗೆ ತಿಳಿದಿತ್ತು. ಪಕ್ಕನೆ ಅವಕಾಶಗಳನ್ನು ಹಿಡಿದುಕೊಂಡು ಸಾಧ್ಯತೆಗಳನ್ನು ನೋಡುವವನಾಗಿ ಕೂಡಲೆ ಮೆಕೆದೋನ್ಯಕ್ಕೆ ಪ್ರಯಾಣ ಬೆಳೆಸಿದನು. ಹೊಸ ಒಡಂಬಡಿಕೆಯ ದೇವರು ನಮ್ಮ ವಿಶ್ವಾಸವನ್ನು ಹಂಚಿಕೊಳ್ಳಲು ದೈವೀಕವಾದ ಅವಕಾಶಗಳನ್ನು ಒದಗಿಸುವ ಸಲುವಾಗಿ ಬಾಗಿಲುಗಳನ್ನು ತೆರೆಯುವ ದೇವರಾಗಿದ್ದಾನೆ. ಅಪೋಸ್ತಲರ ಕೃತ್ಯಗಳು ಪುಸ್ತಕದಾದ್ಯಂತ ದೇವರು ಕಾರ್ಯ ನಿರತನಾಗಿರುವುದನ್ನು ನೋಡುತ್ತೇನೆ. ಪಟ್ಟಣಗಳಲ್ಲಿ ಸೀಮೆಗಳಲ್ಲಿ, ದೇಶಗಳಲ್ಲಿ ಅನೇಕ ಬಾಗಿಲುಗಳು ತೆರೆಯಲ್ಪಟ್ಟವು. ಅವುಗಳೆಲ್ಲಾ ವ್ಯಕ್ತಿಗತ ಹೃದಯಗಳಾಗಿದ್ದವು.

ಅ.ಕೃ. 8:26–38 ವಚನಗಳನ್ನು ಓದಿರಿ. ಫಿಲಿಪ್ಪನು ದೇವರ ನಡೆಸುವಿಕೆಗೆ ತನ್ನನ್ನು ಒಪ್ಪಿಸಿಕೊಟ್ಟ ಬಗ್ಗೆ ಮತ್ತು ದೈವೀಕ ಅವಕಾಶಗಳಿಗೆ ಆತನು ಸ್ಪಂದಿಸಿದ ಬಗ್ಗೆ ಈ ವಚನಗಳು ನಮಗೆ ಏನನ್ನು ಬೋಧಿಸುತ್ತವೆ?

"ದೇವದೂತನು ಫಿಲಿಪ್ಪನನ್ನು ಸತ್ಯದ ಬೆಳಕನ್ನು ಹುಡುಕುವವನಾಗಿ ಸುವಾರ್ತೆಯನ್ನು ಅಂಗೀಕರಿಸಲು ಸಿದ್ಧನಾಗಿದ್ದವನ ಕಡೆಗೆ ಮಾರ್ಗದರ್ಶನ ಮಾಡಿದನು, ಇಂದು ಸಹಾ ದೇವದೂತರು ಪರಿಶುದ್ಧಾತ್ಮನಿಂದ ಪವಿತ್ರರಾಗುವುದಕ್ಕೆ ತಮ್ಮ ನಾಲಗೆಯನ್ನು, ಶುದ್ಧವಾಗುವುದಕ್ಕೂ ಉದಾತ್ತಗೊಳ್ಳುವುದಕ್ಕೂ ತಮ್ಮ ಹೃದಯಗಳನ್ನು ಒಪ್ಪಿಸಿಕೊಡುತ್ತಾರೋ ಅವರ ಹೆಜ್ಜೆಗಳಿಗೆ ಮಾರ್ಗದರ್ಶನ ಮಾಡುತ್ತಾರೆ. ಇಥಿಯೋಪಿಯನಿಗೆ ಫಿಲಿಪ್ಪನು ಮಾಡಿದ ಸುವಾರ್ತೆಯ ಕೆಲಸವನ್ನು ಆತನನ್ನು ಆ ಕೆಲಸಕ್ಕೆ ಕಳುಹಿಸಿದ ದೇವದೂತನೇ ಅದನ್ನು ಮಾಡಬಹುದಾಗಿತ್ತು ಆದರೆ ದೇವರು ಕೆಲಸ ಮಾಡುವ ರೀತಿ ಇದಲ್ಲ; ಮನುಷ್ಯರು ತಮ್ಮ ಸಹ ಜೀವಿಗಳ ರಕ್ಷಣೆಗಾಗಿ ಕೆಲಸ ಮಾಡಬೇಕೆಂಬುದು ದೇವರ ಯೋಜನೆಯಾಗಿದೆ"– ಎಲೆನ್ ಜಿ ವೈಟ್ ಅಪೋಸ್ತಲನ ಕೃತ್ಯಗಳು ಪುಟ 109.

ನಾವು ಆಲಿಸುವ ಕಿವಿಗಳನ್ನು ನೋಡುವ ಕಣ್ಣುಗಳನ್ನು ಹೊಂದಿದ್ದರೆ ನಮ್ಮ ಕಣ್ಣಿಗೆ ಕಾಣಿಸದ ದೇವದೂತರು ಸತ್ಯವನ್ನು ಹುಡುಕುವವರಿಗೆ ಪರಲೋಕದ ಸತ್ಯವನ್ನು ತಲುಪಿಸುವುದಕ್ಕೆ ನಮಗೂ ಸಹಾ ಮಾರ್ಗದರ್ಶನ ಮಾಡುತ್ತಾರೆ. ಈ ಕಥೆಯಲ್ಲಿ ದೇವರವಾಕ್ಯವು ಎಷ್ಟು ಪ್ರಧಾನವಾಗಿದೆ ಎಂಬುದನ್ನು ಗಮನಿಸಿರಿ. ಈ ಸಂದರ್ಭದಲ್ಲಿ ವಾಕ್ಯ ತಿಳಿದವನು ಅದನ್ನು ವಿವರಿಸುವುದೂ ಸಹ ಬಹಳ ಮುಖ್ಯವೆಂಬುದನ್ನು ಗಮನಿಸಿರಿ. ನಮಗೆ ಇಲ್ಲಿ ಯಾವ ಪಾಠಗಳಿವೆ?

**ಶುಕ್ರವಾರ** **ಜುಲೈ 17**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ ಅಪೋಸ್ತಲರ ಕೃತ್ಯಗಳು ಪುಸ್ತಕದಲ್ಲಿ ಪುಟ 103–111ರಲ್ಲಿರುವ 'ಸಮಾರ್ಯ ಸೀಮೆಯಲ್ಲಿ ಸುವಾರ್ತೆ' ಎಂಬ ಅಧ್ಯಾಯವನ್ನು ಓದಿರಿ.

ನಮ್ಮ ಸುತ್ತಮುತ್ತವಿರುವ ಜನರು ಶಾಶ್ವತವಾದ ಪದಾರ್ಥಗಳಿಗಾಗಿ ಹುಡುಕಾಟ ಮಾಡುತ್ತಿದ್ದಾರೆ. ಯೇಸುವು ಬುದ್ಧಿಪೂರ್ವಕವಾಗಿ ಹೀಗೆ ಹೇಳುತ್ತಾನೆ : ಬೆಳೆಯು ಬಹಳ, ಕೆಲಸದವರು ಸ್ವಲ್ಪ (ಮತ್ತಾಯ 9:37) ಹೀಗಿರುವುದರಿಂದ ಸಮಸ್ಯೆ ಇರುವುದು ಸುಗ್ಗಿಯಲ್ಲಿ ಅಲ್ಲ. ದೈವೀಕ ಅಭಿಷಿಕ್ತತೆಯನ್ನು ಹೊಂದಿದ ಕಣ್ಣುಗಳಿಂದ ಯೇಸುವು ಬಹಳ ಬೆಳೆಯನ್ನು ನೋಡಿದನು. ಆದರೆ ಶಿಷ್ಯರು ಸ್ವಲ್ಪವನ್ನು ಮಾತ್ರ ನೋಡಿದರು. ಈ ಸಮಸ್ಯೆಗೆ ಕ್ರಿಸ್ತನು ನೀಡಿದ ಪರಿಹಾರವೇನು? "ಆದುದರಿಂದ ಬೆಳೆಯ ಯಜಮಾನನ್ನು ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ" ಎಂದು ಹೇಳಿದನು (ಮತ್ತಾಯ 9:38). ತನ್ನ ಬೆಳಗೆ ಬೇಕಾಗುವಷ್ಟು ಕೆಲಸಗಾರರನ್ನು ಕಳುಹಿಸುವಂತೆ ದೇವರನ್ನು ಬೇಡುವುದೇ ಇದಕ್ಕೆ ತಕ್ಕ ಪರಿಹಾರ.

"ಕರ್ತನೇ ನಿನ್ನ ರಾಜ್ಯದ ಬರೋಣಕ್ಕೆ ನಾನು ಉಪಯೋಗಿಸಲ್ಪಡಲು ಸಿದ್ಧವಾಗಿದ್ದೇನೆ ಪ್ರತಿದಿನವೂ ನೀನು ನನ್ನ ಮುಂದೆ ಇಟ್ಟಿರುವ ದೈವೀಕ ಅವಕಾಶಗಳನ್ನು ನೋಡುವುದಕ್ಕೆ ನನ್ನ ಕಣ್ಣುಗಳನ್ನು ತೆರೆ ನನ್ನ ಸುತ್ತಲೂ ಇರುವ ಜನರಿಗೆ ಸಂವೇದನೆಯುಳ್ಳವನಾಗಿರುವುದಕ್ಕೆ ನನಗೆ ಕಲಿಸು. ಪ್ರತಿದಿನವು ನನ್ನ ಸಂಪರ್ಕಕ್ಕೆ ಬರುವ ಜನರೊಂದಿಗೆ ನಿನ್ನ ಪ್ರೀತಿ ಮತ್ತು ಸತ್ಯವನ್ನು

ಹಂಚಿಕೊಳ್ಳುವುದಕ್ಕೆ ಮತ್ತು ಪ್ರೋತ್ಸಾಹ ತುಂಬಿದ ಭರವಸೆಯ ಮಾತುಗಳನ್ನಾಡುವುದಕ್ಕೆ ನನಗೆ ಸಹಾಯ ಮಾಡು" ಎಂದು ನೀವು ಪ್ರಾರ್ಥನೆ ಮಾಡಬಾರದೇಕೆ? ಹೀಗೆ ನೀವು ಪ್ರಾರ್ಥಿಸುವುದಾದರೆ ದೇವರು ನಿಮ್ಮ ಜೀವಿತದಲ್ಲಿ ಕೆಲವು ಅಸಾಧಾರಣ ಕೆಲಸಗಳನ್ನು ಮಾಡುತ್ತಾನೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಯೇಸುಕ್ರಿಸ್ತನಿಗೆ ಆತ್ಮಗಳನ್ನು ತರುವುದಕ್ಕೆ ನೀವು ಕೆಲಸ ಮಾಡುವವರಾಗಿದ್ದರೆ ನಿಮಗೆ ಒಂದು ವಿಷಯ ತಿಳಿದಿರಬೇಕು ಅದೇನೆಂದರೆ ಅದು ಯಾವಾಗಲೂ ಸುಲಭವಾಗಿರುವುದಿಲ್ಲ ಅಲ್ಲವೇ? ಹೌದು, ಇದು ದಿಟ, ದೇವರು ಮಾತ್ರ ಹೃದಯಗಳನ್ನು ಪರಿವರ್ತಿಸಬಲ್ಲವನಾಗಿದ್ದಾನೆ, ಆದರೆ ಈ ಪ್ರತಿಕ್ರಿಯೆಯಲ್ಲಿ ನಾವು ಅದರ ಭಾಗವಾಗಿರುವಂತೆ ನಮ್ಮನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಒಂದೇ ಆತ್ಮಕ್ಕಾಗಿ ಕೆಲಸ ಮಾಡಿದರೂ ಅದು ಸಮಯವನ್ನು ಶ್ರಮೆಯನ್ನು ಮತ್ತು ತಾಳ್ಮೆಯನ್ನು ಮೇಲಿಂದ ಹುಟ್ಟುವ ಪ್ರೀತಿಯನ್ನು ತೆಗೆದುಕೊಳ್ಳುತ್ತದೆ. ಯೇಸುಕ್ರಿಸ್ತನಿಗಾಗಿ ಪರಿಣಾಮಕಾರಿಯಾದ ಸಾಕ್ಷಿಯಾಗಿರುವುದಕ್ಕೆ ಸಹಾಯವಾಗುವಂತೆ ನಿಮ್ಮ ಸ್ವಾರ್ಥಕ್ಕೆ ಸಾಯಲು ಯಾವ ಆಯ್ಕೆಗಳನ್ನು ಮಾಡುವಿರಿ?

2. ಕರ್ತನನ್ನು ಅರಿಯದ ಕೆಲವರು ನಿಮ್ಮ ಸಂಪರ್ಕಕ್ಕೆ ಬರುತ್ತಾರೆ, ಅವರು ಯಾರು? ಅವರಿಗೆ ಸಾಕ್ಷಿ ಕೊಡುವುದಕ್ಕೆ ನೀವು ಏನು ಮಾಡಿದಿರಿ, ಮಾಡುತ್ತಾ ಇರುವಿರಿ ಅಥವಾ ಏನು ಮಾಡಬೇಕಾಗಿದೆ?

3. ತಾರ್ಸಿಸ್‌ನ ಸೌಲನ ಬಗ್ಗೆ ಯೋಚಿಸಿರಿ. ಒಬ್ಬನು ಕಲ್ಪನೆ ಮಾಡಿಕೊಳ್ಳುವಂತೆ ಸೌಲನು ಪರಿವರ್ತನೆ ಮಾಡಲು ಸಾಧ್ಯವೇ ಇಲ್ಲವೆಂದು ತೋರುವಂಥ ಮನುಷ್ಯನಾಗಿದ್ದನು! ಆದಾಗ್ಯೂ ಆತನಿಗೆ ಏನಾಯ್ತು ಎಂಬುದನ್ನು ನಾವು ತಿಳಿದಿದ್ದೇವೆ. ಇತರರ ಹೊರತೋರ್ವಿಕೆಯನ್ನು ನೋಡಿ ಆತುರವಾಗಿ ತೀರ್ಮಾನ ತೆಗೆದುಕೊಳ್ಳುವುದು ಎಷ್ಟು ಅಪಾಯಕರವೆಂಬುದರ ಬಗ್ಗೆ ಇದು ನಮಗೆ ಏನನ್ನು ಹೇಳುತ್ತದೆ?

4. ಸೌಲನ ಕಥೆಯನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಂಡವರಾಗಿ ಮತ್ತಾಯ 7:6ನೇ ವಚನವನ್ನು ನಾವು ಹೇಗೆ ವಿವರಿಸಬಹುದು? "ದೇವರ ವಸ್ತುವನ್ನು ನಾಯಿಗಳಿಗೆ ಹಾಕಬೇಡಿರಿ. ನಿಮ್ಮ ಮುತ್ತುಗಳನ್ನು ಹಂದಿಗಳ ಮುಂದೆ ಚೆಲ್ಲಬೇಡಿರಿ. ಚೆಲ್ಲಿದರೆ ತಮ್ಮ ಕಾಲಿನಿಂದ ಅವುಗಳನ್ನು ತುಳಿದು ಹಿಂತಿರುಗಿ ಬಂದು ನಿಮ್ಮನ್ನು ಸೀಳಿ ಬಿಟ್ಟಾವು".